**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ– 269/2021**

| | | |
|---|---|---|
| **ಸಾಕ್ಷಿದಾರನ ಹೆಸರು** | : ಬಿ.ಎಂ ಪ್ರಕಾಶ್ | **ಪಿ.ಡಬ್ಲ್ಯೂ–2** |
| **ತಂದೆಯ ಹೆಸರು** | : ಬಸವಯ್ಯ | **ಸಿ.ಡಬ್ಲ್ಯೂ– 11** |
| **ವಯಸ್ಸು** | : 62 ವರ್ಷ | |
| **ಉದ್ಯೋಗ** | : ನಿವೃತ್ತ ಎ.ಎಸ್.ಐ | |
| **ವಾಸಸ್ಥಳ** | : ಕೊಳ್ಳೆಗಾಲ | |

**ಸಾಕ್ಷಿಯನ್ನು ಈ ದಿನ ದಿಃ22.01.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನಾನು 2018 ರಿಂದ 2024 ರವರೆಗೆ ತಲಕಾಡು ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿದ್ದು, ನಂತರ ಎ.ಎಸ್.ಐಆಗಿ ಬಡ್ತಿ ಪಡೆದು ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ– 03.10.2019 ರಂದು ನಾನು ತಲಕಾಡು ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ವಾಲ್ಮೀಕಿ ಜಯಂತಿ ಬಂದೋಬಸ್ತ್ ಕರ್ತವ್ಯಕ್ಕೆ ತಲಕಾಡು ಪೊಲೀಸ್ ಠಾಣೆಯಿಂದ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಗೆ ನನಗೆ ನಿಯೋಜಿಸಿದ್ದರು. ನಾನು ಸದರಿ ಕರ್ತವ್ಯಕ್ಕೆ ಬೆಳಿಗ್ಗೆ 7.30 ಗಂಟೆಗೆ ಹೋಗಿ ಹಾಜರಾಗಿರುತ್ತೇನೆ. ನನಗೆ ವೃತ್ತ ನಿರೀಕ್ಷಕರು ಮತ್ತು ಡಿವೈ.ಎಸ್.ಪಿ ರವರು ಸೂಚನೆಗಳನ್ನು ನೀಡಿ ನನ್ನನ್ನು ವಾಲ್ಮೀಕಿ ಜಯಂತಿಯ ಮೆರವಣಿಗೆಯ 6 ನೇ ಕಲಾ ತಂಡಕ್ಕೆ ನಿಯೋಜಿಸಿದ್ದರು. ವಾಲ್ಮೀಕಿ ಜಯಂತಿಯ ಮೆರವಣಿಗೆ 8.30 ರ ಸುಮಾರಿಗೆ

ಪ್ರಾರಂಭವಾಗಿ ಜೂನಿಯರ್ ಕಾಲೇಜು ಮೈದಾನದಿಂದ ಮೆರವಣಿಗೆ ಹೊರಟು ಚಿಂತಾಮಣಿ ಗಣಪತಿ ದೇವಸ್ಥಾನದ ಬಳಿ ಬರುತ್ತಿರುವಾಗ, ಅಲ್ಲಿ 70 ರಿಂದ 80 ಜನ ಹುಡುಗರು ತಮಗೆ ಡಿ.ಜೆ ಬೇಕು ಎಂದು ಕೂಗಾಡಿ ಗಲಾಟೆ ಮಾಡುತ್ತಿದ್ದರು. ಆಗ ಡಿಎಸ್.ಪಿ ಮತ್ತು ವೃತ್ತ ನಿರೀಕ್ಷಕರು ಅವರೂ ಕೂಡ ಮೆರವಣಿಗೆ ಬಂದೂಬಸ್ತಿನಲ್ಲಿದ್ದು, ನಂತರ ಅವರು ಸ್ಥಳಕ್ಕೆ ಬಂದು ಅಲ್ಲಿ ನೆರದಿದ್ದ 70 ರಿಂದ 80 ಜನ ಹುಡುಗರಿಗೆ ನಿಮಗೆ ಆಗಲೇ ಒಂದು ಡಿಜೆಗೆ ಅನುಮತಿ ನೀಡಲಾಗಿದ್ದು, ಇನ್ನೊಂದು ಡಿಜೆಗೆ ಅನುಮತಿ ನೀಡಲು ಬರುವುದಿಲ್ಲ ಎಂದು ಹೇಳಿರುತ್ತಾರೆ. ನಂತರ ಅಲ್ಲಿದ್ದ ಹುಡುಗರು ತಮಗೆ ಡಿಜೆ ಬೇಕೇ ಬೇಕು ಎಂದು ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಪೊಲೀಸರಿಗೆ ಬೈದು, ರಸ್ತೆಯನ್ನು ಅಡ್ಡಗಟ್ಟಿ ವಾಹನ ಸಂಚಾರಕ್ಕೆ ಅಡೆತಡೆ ಮಾಡುತ್ತಿದ್ದರು. ಅಲ್ಲಿದ್ದ ಡಿ.ಆರ್ ತುಕಡಿ ಮತ್ತು ಉಪವಿಭಾಗದ ಸಿಬ್ಬಂದಿಗಳು ಅಲ್ಲಿ ಗಲಾಟೆ ಮಾಡುತ್ತಿದ್ದ ಗುಂಪನ್ನು ಚದುರಿಸಲು ಪ್ರಯತ್ನಿಸಿದರು. ಆಗ ಅಲ್ಲಿ ನೆರೆದಿದ್ದ ಗುಂಪಿನಿಂದ ಪೊಲೀಸರ ಮೇಲೆಕಲ್ಲು ಎಸೆಯಲು ಪ್ರಾರಂಭಿಸಿದರು. ಸದರಿ ಕಲ್ಲಿನ ಏಟು ನನ್ನ ಎದೆಗೆ ಮತ್ತು ಎಡಗೈಗೆ ಬಿದ್ದಿರುತ್ತದೆ. ನಾನಲ್ಲದೇ ಬೇರೆ ಬಂದೋಬಸ್ತಿನಲ್ಲಿ ಇದ್ದ ಸಿಬ್ಬಂದಿಗಳಿಗೂ ಸಹ ಕಲ್ಲಿನ ಏಟುಗಳು ಬಿದ್ದಿರುತ್ತದೆ. ಅಲ್ಲಿ ಶಂಕರ ಎನ್ನುವವನು ತನ್ನ ಇನೋವಾ ಕಾರನ್ನು ಪೊಲೀಸರ ಮೇಲೆ ಹತ್ತಿಸಲು ಸಹ ಪ್ರಯತ್ನಿಸಿರುತ್ತಾನೆ. ಆದರೆ ಆತ ಅಲ್ಲಿಂದ ತಪ್ಪಿಸಿಕೊಂಡು ಹೊರಟು ಹೋಗಿರುತ್ತಾನೆ. ಅಲ್ಲಿ ಐದಾರು ಜನ ಪೊಲೀಸ್ ಸಿಬ್ಬಂದಿಗಳಿಗೆ ಏಟಾಗಿರುತ್ತದೆ. ಈ ರೀತಿ ಗಲಾಟೆ ಆಗುವಾಗ ಡಿವೈಎಸ್.ಪಿ ಮಲ್ಲಿಕ್ ರವರು ಅಲ್ಲಿ ನೆರೆದಿದ್ದ ಜನರಿಗೆ ಪೊಲೀಸ್ ವಾಹನದಲ್ಲಿದ್ದ ಮೈಕ್ ನಿಂದ ರಸ್ತೆಯನ್ನು ಅಡ್ಡಗಟ್ಟಬೇಡಿ, ಅಕ್ರಮ ಕೂಟವನ್ನು ಕಟ್ಟಿ

ಗಲಾಟೆ ಮಾಡಬೇಡಿ, ಸ್ಥಳದಿಂದ ಹೋಗುವಂತೆ ಸೂಚಿಸಿರುತ್ತಾರೆ. ಆದರೂ ಕೂಡ ಅಲ್ಲಿದ್ದ ಆಸಾಮಿಗಳು ಗಲಾಟೆ ಮಾಡಿ ಕಲ್ಲು ತೂರಾಟ ಮಾಡಿ ಸಿಬ್ಬಂದಿಗಳಿಗೆ ಗಾಯ ಮಾಡಿರುತ್ತಾರೆ ಮತ್ತು ರಸ್ತೆಗಳನ್ನು ತಡೆಗಟ್ಟಿ ಸಂಚಾರಕ್ಕೆ ಅಡ್ಡಿಪಡಿಸಿರುತ್ತಾರೆ. ಆ ರೀತಿ ಗುಂಪು ಕಲ್ಲು ತೂರಾಟ ಮಾಡುತ್ತಾ, ಸರ್ಕಾರಿ ಇಲಾಖಾ ವಾಹನಗಳಿಗೆ ಜಖಂ ಮಾಡಿ ಹಾನಿ ಮಾಡಿರುತ್ತಾರೆ ಮತ್ತು ಸಾರ್ವಜನಿಕರ ವಾಹನಗಳಿದ್ದು, ಅವುಗಳಿಗೂ ಸಹ ಜಖಂ ಮಾಡಿ ಅಲ್ಲಿದ್ದ ಸ್ವತ್ತುಗಳಿಗೆ ಹಾನಿ ಮಾಡಿರುತ್ತಾರೆ. ಅಲ್ಲಿ ನನಗೆ ನೆನಪಿದ್ದಂತೆ ಪುರುಷೋತ್ತಮ ಎನ್ನುವ ಸಾರ್ವಜನಿಕರ ಕಾರನ್ನು ಜಖಂ ಮಾಡಿ ಹಾನಿ ಮಾಡಿರುತ್ತಾರೆ.

**3.** ನಂತರ ಪೊಲೀಸ್ ಸಿಬ್ಬಂದಿಗಳು ಲಾಠಿ ಚಾರ್ಜ್ ಮಾಡಿ ಅಲ್ಲಿ ಗಲಾಟೆ ಮಾಡುತ್ತಿದ್ದವರನ್ನು ಸ್ಥಳದಿಂದ ಕಳುಹಿಸಿರುತ್ತಾರೆ. ನನಗೆ ಏಟಾಗಿದ್ದರಿಂದ ನಾನು ನಂಜನಗೂಡು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ.

**4.** ನಂತರ ಚಾ.ಸಾಃ**31** ಪುನೀತ್ ರವರು ನಮ್ಮನ್ನು ಠಾಣೆಗೆ ಕರೆದು ಘಟನೆಗೆ ಬಗ್ಗೆ ನಮ್ಮ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ. ನಾನು ಠಾಣೆಗೆ ಹೋದಾಗ ನ್ಯಾಯಾಲಯದಲ್ಲಿರುವ ಆರೋಪಿತರೆಲ್ಲರು ಅಲ್ಲಿ ಇದ್ದರು. ಘಟನೆ ಬಗ್ಗೆ ವಿಚಾರಣೆ ಮಾಡಲು ಸದರಿ ಆರೋಪಿತರನ್ನು ಠಾಣೆಗೆ ಕರೆಸಿಕೊಂಡಿದ್ದರು.

**5.** ಕಲ್ಲು ತೂರಾಟ ಮಾಡಿದವರನ್ನು ಗುರುತಿಸಬಲ್ಲೆ. ನನಗೆ ಕಲ್ಲು ಹೊಡೆದ ಅಸಾಮಿಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ **6** ಮತ್ತು **7** ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**6.** ಘಟನಾ ಸಮಯದಲ್ಲಿ ಹಲ್ಲೆ ಮಾಡಲು ಉಪಯೋಗಿಸಿದ ಕಲ್ಲುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಮು.ಮಾಃ–1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ–**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಯಾವುದೇ ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**